ಇ) ಇಲಾಖೆಯಲ್ಲಿರುವ ಒಟ್ಟು ಸಹಕಾರಿ ಸಂಘಗಳ ಸಂಖ್ಯೆ ದಿನಾಂಕ:1-4-2002 ಕ್ಕೆ ಎಷ್ಟು;

ಈ) ಸಹಕಾರ ಇಲಾಖೆಯಲ್ಲಿರುವ ವಿವಿಧ ಹುದ್ದೆಗಳ ಹಾಗೂ ನೌಕರರ ಒಟ್ಟು ಸಂಖ್ಯೆ ಎಷ್ಟು?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು):

	ವರ್ಷ	ನಿಗಧಿಪಡಿಸಿದ ಹಣ	ವೆಚ್ಚವಾದ ಹಣ
		(ರೂ. ಲಕ್ಷಗಳಲ್ಲಿ)	
1.	1999-2000	2622.34	2304.81
2.	2000-2001	2269.31	1833.27
3.	2001-2002	2373.54	2067.84

ಅ) ರೂ. 2236.36.86 ಲಕ್ಷಗಳು.

ಇ) 30862.

ಈ) ಹುದ್ದೆಗಳು - 2375

ನೌಕರರು - 2031

ರಾಜ್ಯದಲ್ಲಿ ಅಂಗನವಾಡಿ ಮಕ್ಕಳಿಗೆ ಹಾಲು ಸರಬರಾಜು ಯೋಜನೆ

148(153) ಶ್ರೀ ಪೂಜಾರ್ ಪಿ.ಹೆಚ್. (ಬಾಗಲಕೋಟೆ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಒಟ್ಟು ಅಂಗನವಾಡಿ ಕೇಂದ್ರಗಳೆಷ್ಟು?

ಅವುಗಳಲ್ಲಿ ದಾಖಲಾಗಿರುವ ಮಕ್ಕಳ ಸಂಖ್ಯೆ ಎಷ್ಟು?

ಜಿಲ್ಲಾವಾರು ವಿವರ ನೀಡುವುದು?

ಆ) ಅಂಗನವಾಡಿ ಮಕ್ಕಳಿಗೆ ಮಧ್ಯಾಹ್ನದ ವೇಳೆ ಉಚಿತವಾಗಿ ಹಾಲು ವಿತರಿಸಲು ಸರ್ಕಾರ ನಿರ್ಧರಿಸಿದೆಯೇ?

ಇ) ಹಾಲು ವಿತರಣಾ ಯೋಜನೆಯಿಂದ ಸರ್ಕಾರಕ್ಕೆ ಬರುವ ಖರ್ಚು ಎಷ್ಟು?

ಈ) ಹಾಲನ್ನು ಎಲ್ಲಿಂದ ಪಡೆಯಲಾಗುತ್ತದೆ? ಯಾವಾಗಿನಿಂದ ಈ ಯೋಜನೆ ಜಾರಿಗೆ ಬರಲಿದೆ?

ಉ) ಇದರಿಂದ ಮಕ್ಕಳ ದಾಖಲಾತಿ ಸಂಖ್ಯೆಯು ಗಣನೀಯವಾಗಿ ಹೆಚ್ಚಾಗುವುದೆ?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು): ಅ) ರಾಜ್ಯದಲ್ಲಿ ಒಟ್ಟು 40301 ಅಂಗನವಾಡಿ ಕೇಂದ್ರಗಳು ಇವೆ.

ಅವುಗಳಲ್ಲಿ ದಾಖಲಾಗಿರುವ ಮಕ್ಕಳ ಸಂಖ್ಯೆ 2834178

ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಆ) ಅಂಗನವಾಡಿ ಮಕ್ಕಳಿಗೆ ಮಧ್ಯಾಹ್ನದ ವೇಳೆ ಉಚಿತವಾಗಿ ಹಾಲು ವಿತರಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಹಾಲು ವಿತರಣಾ ಯೋಜನೆಯಿಂದ ಸರ್ಕಾರಕ್ಕೆ ಬರುವ ಖರ್ಚು ರೂ. 115.83 ಕೋಟಿಗಳು

ಈ) ಅಂತಿಮ ತೀರ್ಮಾನ ತೆಗೆದುಕೊಂಡ ನಂತರ ನಿರ್ಧರಿಸಲಾಗುವುದು.

ಉ) ಹೌದು.

Annexure

Name of the district	Enrolled Beneficiaries
Bangalore	72564
Bangalore Rural	102974
Bagalkote	89738
Belgaum	256461
Bellary	107132
Bidar	97737
Bijapur	95216
Chamarajanagar	71146
Chickmangalur	59637
Chitradurga	98719
Davangere	93419
Dakshinakannada	101358
Dharwad	71739
Gadag	77408
Gulbarga	203996
Hassan	87892

Haveri	97799
Kodagu	37676
Kolar	151532
Koppal	72983
Mandya	92819
Mysore	128572
Raichur	95336
Shimoga	69620
Tumkur	137203
Udupi	60034
Uttara Kannada	203468
Total	2834178

ಹಾಸನ ಜಿಲ್ಲೆಯಲ್ಲಿ ತೋಟಗಾರಿಕೆ ಇಲಾಖೆಯ ತೋಟಗಳಿಂದ ಆದಾಯ

149(420) ಶ್ರೀ ಪುಟ್ಟರಂಗನಾಥ.ಎಸ್.ಹೆಚ್. (ಬೇಲೂರು) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆಯಲ್ಲಿ ತೋಟಗಾರಿಕೆ ಇಲಾಖೆಯ ವ್ಯಾಪ್ತಿಯಲ್ಲಿ ಎಷ್ಟು ತೋಟಗಳಿವೆ; ಇವುಗಳ ವಾರ್ಷಿಕ ಆದಾಯವೆಷ್ಟು (ತಾಲ್ಲೂಕುವಾರು ವಿವರ ನೀಡುವುದು)

ಆ) ಬೇಲೂರು ತಾಲ್ಲೂಕಿನ ಎರಡು ಫಾರಂಗಳು ನಷ್ಟದಲ್ಲಿದ್ದು ಇದರ ಬಗ್ಗೆ ಯಾವ ಕ್ರಮವನ್ನು ಕೈಗೊಳ್ಳಲಾಗಿದೆ;

ಇ) ನಷ್ಟ ಅನುಭವಿಸಲು ಕಾರಣಗಳೇನು ಮತ್ತು ಸಿಬ್ಬಂದಿಯ ಸಂಬಳವೆಷ್ಟು?

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು):

ಅ) 17 ತೋಟಗಾರಿಕೆ ಕ್ಷೇತ್ರ/ ನರ್ಸರಿಗಳಿವೆ. ಅವುಗಳಿಂದ ವರ್ಷಂಪ್ರತಿ 21.6 ಲಕ್ಷ ರೂ. ಆದಾಯ ಬರುತ್ತಿದೆ. ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

ಆ) ಕೊನ್ನೇರಳು ಹಾಗೂ ಚೀಲನಾಯಕನಹಳ್ಳಿ ತೋಟಗಾರಿಕೆ ಕ್ಷೇತ್ರಗಳನ್ನು ಉತ್ತಮ ಗುಣಮಟ್ಟದ ಗಿಡಗಳ ಉತ್ಪಾದನೆ ಮತ್ತು ವಿತರಣೆಗೆ ರೈತರಿಗೆ ಪ್ರಾತ್ಯಕ್ಷತೆಗಳಾಗಿ ಹಾಗೂ ಅಭಿವೃದ್ಧಿ ಮಾಡಲು ಹಾಗೂ ಸ್ಥಳೀಯ ಭೂ ಹವಾಗುಣಗಳಿಗೆ ಬೆಳೆಗಳು ಹೊಂದಿಕೊಳ್ಳುವ ಬಗ್ಗೆ ಅಧ್ಯಯನ ನಡೆಸಲು ಸ್ಥಾಪಿಸಲಾಗಿದೆ. ಆದುದರಿಂದ ಲಾಭ ಮಾಡುತ್ತಿರುವುದಿಲ್ಲ.

ಇ) ಕ್ಷೇತ್ರಗಳನ್ನು ಅಭಿವೃದ್ಧಿಪಡಿಸಲು ಅಗತ್ಯವಿರುವ ಆಯವ್ಯಯವನ್ನು ಒದಗಿಸಿದ ಕ್ರಮ ಕೈಗೊಳ್ಳಲಾಗುತ್ತಿದೆ.